ಓ ಎಸ್ ನಂಃ 138/2017
ಡಿ ಡಬ್ಲ್ಯೂ ಃ 3

ದಿಃ 05.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಪಿ ವಕೀಲರಿಂದ :-

ನಾನು ಬಿ ಎ ಪದವೀಧರ. ನನಗೆ ಕನ್ನಡ ಹಾಗೂ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ಈ ದಾವೆಯ ಪ್ರತಿವಾದಿ ನನ್ನ ಅಕ್ಕ. ಈ ದಾವೆಯ ಪ್ರತಿವಾದಿ ತಮ್ಮ ಅಕ್ಕ ಆಗಿರುವ ಕಾರಣ ಅವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ತಾವು ನ್ಯಾಯಲಯಕ್ಕೆ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಮ್ಮ ವಕೀಲರು ತಯಾರು ಮಾಡಿರುತ್ತಾರೆ, ಆದರೆ ಅವರ ಹೆಸರು ಈಗ ನನಗೆ ನೆನಪಿಲ್ಲ. ನಮ್ಮ ವಕೀಲರ ಕಛೇರಿ ಮಾಗಡಿಯ ತಾಲ್ಲೂಕು ಕಛೇರಿಯ ಬಳಿ ಇದೆ. ನಾನು ಒಬ್ಬನೇ ನಮ್ಮ ವಕೀಲರ ಕಛೇರಿಗೆ ಹೋಗಿರುತ್ತೇನೆ. ನಾನು ನಮ್ಮ ವಕೀಲರ ಕಛೇರಿಗೆ ಹೋಗುವಾಗ ಯಾವುದೇ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಈ ದಾವೆಯ ವಿಚಾರದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯ ವಾದ ಪತ್ರ, ಪ್ರತಿವಾದ ಪತ್ರ ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸದರಿ ದಾಖಲಾತಿಗಳನ್ನು ನಾನು ನಮ್ಮ ವಕೀಲರ ಕಛೇರಿಯಲ್ಲಿ ಪರಿಶೀಲನೆ ಮಾಡಿರುತ್ತೇನೆ. ಸದರಿ ವಕೀಲರು ಯಾರು ಈ ಹಿಂದೆ ದಾವೆಯನ್ನು ನಡೆಸುತ್ತಿದ್ದ ವಕೀಲರು. ನಾನು ನಮ್ಮ ವಕೀಲರ ಕಛೇರಿಗೆ ಒಂದು ವರ್ಷದ ಹಿಂದೆ ಹೋಗಿರುತ್ತೇನೆ. ನಾನು ವಕೀಲರ ಕಛೇರಿಗೆ ಹೋದಂತಃ ಸಂದರ್ಭದಲ್ಲಿ ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರು ಮಾಡಿರುವುದಿಲ್ಲ. ನಾನು ಈ ದಾವೆಯ ಪಕ್ಷಗಾರನಲ್ಲ.

ನಂಜಮ್ಮ ಹಾಗೂ ತಿಮ್ಮರಾಯಪ್ಪ ನನ್ನ ಅಜ್ಜ ಮತ್ತು ಅಜ್ಜಿ. ಸದರಿಯವರಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಈ ದಾವೆಯ ವಾದಿ ನನ್ನ ಚಿಕ್ಕಪ್ಪ. ನಂಜಮ್ಮ ಹಾಗೂ ತಿಮ್ಮರಾಯಪ್ಪರವರ ಎರಡನೇ ಮಗ ಕೆ ಟಿ ರಾಧಾಕೃಷ್ಣಗೌಡ, ಸದರಿಯವರು ನನ್ನ ತಂದೆ. ನಂಜಮ್ಮ ಹಾಗೂ ತಿಮ್ಮರಾಯಪ್ಪ ಹಾಗೂ ಅವರ ಮಕ್ಕಳು ತಮ್ಮ ಕುಟುಂಬದ ಆಸ್ತಿಗಳನ್ನು ನೋಂದಾಯಿತ ವಿಭಾಗ ಪತ್ರದ ಮುಖಾಂತರ ದಿಃ 15.01.1970 ರಲ್ಲಿ

ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಅನ್ವಯ 'ಎ' ಷೆಡ್ಯೂಲ್ ಸ್ವತ್ತು ನಂಜಮ್ಮರವರಿಗೆ 'ಬಿ' ಷೆಡ್ಯೂಲ್ ಸ್ವತ್ತು ಸರೋಜಮ್ಮರವರಿಗೆ, 'ಸಿ' ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ, 'ಡಿ' ಷೆಡ್ಯೂಲ್ ಸ್ವತ್ತು ಕೆ ಟಿ ವಿಜಯಕುಮಾರರವರಿಗೆ ಹಾಗೂ 'ಇ' ಷೆಡ್ಯೂಲ್ ಸ್ವತ್ತು ಕೆ ಟಿ ವಿಶ್ವನಾಥ್ ರವರಿಗೆ ಬಂದಿರುತ್ತದೆ ಎಂದರೆ ಸರಿ. ದಿಃ 23.03.1971 ರಲ್ಲಿ ನಂಜಮ್ಮನವರಿಗೆ ಸೇರಿದ ಸ್ವತ್ತು ಹಾಗೂ ವಾದಿಗೆ ಸೇರಿದ ಸ್ವತ್ತನ್ನು ಈ ಇಬ್ಬರು ಒಂದು ನೋಂದಾಯಿತ ವಿನಿಮಯ ಪತ್ರದ ಮುಖಾಂತರ ವಿನಿಮಯ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯ ಆಧಾರದ ಮೇಲೆ ಅವರವರ ಹೆಸರಿಗೆ ಕಂದಾಯ ದಾಖಲಾತಿಗಳು ವರ್ಗಾವಣೆ ಆಗಿದೆ ಎಂದರೆ ಸರಿ. ನಿಡಿ 1 ರ ಪ್ರಕಾರ ಒಂದನೇ ತಾಕು 4 ಎಕರೆ, ಎರಡನೇ ತಾಕು 1 ಎಕರೆ, ಈ ಎರಡು ಆಸ್ತಿಗಳ ಚಕ್ಕುಬಂದಿ ಬೇರೆ ಬೇರೆ ಎಂದರೆ ಸರಿ. ನಿಡಿ 1 ರ ದಾಖಲೆಯಲ್ಲಿ ನಮೂದು ಮಾಡಿರುವ ಒಂದನೇ ತಾಕು ಜಮೀನಿಗೂ ಹಾಗೂ ಎರಡನೇ ತಾಕಿನ ಜಮೀನಿನ ನಡುವೆ ಸುಮಾರು 250 ಮೀ. ಅಂತರ ಇದೆ. ವಿಭಾಗ ಪತ್ರದ ಪ್ರಕಾರ ಎಲ್ಲರೂ ತಮ್ಮ ತಮ್ಮ ಹಿಸ್ಸೆಗಳಲ್ಲಿ ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಮತ್ತು ಪ್ರತಿವಾದಿಯ ಸ್ವತ್ತಿನ ಬಗ್ಗೆ ಅಳತೆ ಆದ ವಿಚಾರ ನನಗೆ ಗೊತ್ತಿಲ್ಲ. ನಾನು ನಮ್ಮ ವಕೀಲರ ಬಳಿ ಸದರಿ ವಿಚಾರ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿರುವುದಿಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ ವಾದಿಯು ಹೂಡಿರುವ ದಾವಾ ಸ್ವತ್ತುಗಳ ಸರ್ವೆ ನಂ., ವಿಸ್ತೀರ್ಣ ಹಾಗೂ ಚಕ್ಕುಬಂದಿ ಸರಿ ಇರುವುದಿಲ್ಲ ಎಂದು ಹೇಳಿದ್ದೀರಿ, ಯಾವ ಆಧಾರದ ಮೇರೆಗೆ ಸದರಿ ವಿಚಾರವನ್ನು ತಾವು ಹೇಳಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ನಾನು ವೈಯಕ್ತಿಕವಾಗಿ ನೋಡಿದ್ದೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳು ಹಾಗೂ ಆಧಾರ ಇರುವುದಿಲ್ಲ. ದಾವಾ 'ಬಿ' ಷೆಡ್ಯೂಲ್ ನ ಚಕ್ಕುಬಂದಿ ಪೂರ್ವಕ್ಕೆ ಸರ್ವೆ ನಂ. 63, ಪಶ್ಚಿಮಕ್ಕೆ ಕೆ ಟಿ ವಿಶ್ವನಾಥರವರ ಜಮೀನು ಇದೆ ಎಂದರೆ ಸಾಕ್ಷಿಯು ಕೆ ಟಿ ವಿಶ್ವನಾಥರವರ ಜಮೀನು ಇರುವುದಿಲ್ಲ. ಆದರೆ ಹಳ್ಳಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಉತ್ತರಕ್ಕೆ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ದಕ್ಷಿಣಕ್ಕೆ ವಾದಿಯ ಜಮೀನು ಇದೆ ಎಂದರೆ ಸರಿ. ದಾವಾ 'ಬಿ' ಷೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ಹಳ್ಳಿ ಇಲ್ಲ ಆದರೆ ಕೆ ಟಿ ವಿಶ್ವನಾಥರವರ ಜಮೀನು ಇದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ

**ಓ ಎಸ್ ನಂಃ 138/2017**

**ಡಿ ಡಬ್ಲ್ಯೂ ಃ 3**

ಪ್ರತಿವಾದಿಯು ಯಾವ ಯಾವ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ ಸದರಿ ದಾಖಲಾತಿಗಳನ್ನು ತಾವು ನೋಡಿರುತ್ತೀರ ಎಂದರೆ ಸಾಕ್ಷಿ ನೋಡಿರುತ್ತೇನೆ. ಈ ದಾವೆಯಲ್ಲಿ ವಾದಿಯು ಸಲ್ಲಿಸಿರುವ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ವಾದಿಯು ಸಲ್ಲಿಸಿರುವ ಛಾಯಾಚಿತ್ರಗಳು ಹಾಗೂ ಪ್ರತಿವಾದಿ ಸಲ್ಲಿಸಿರುವ ಛಾಯಾಚಿತ್ರಗಳಲ್ಲಿ ಸಲ್ಲಿಸಿರುವ ಆಸ್ತಿಗಳು ಒಂದೇ ಎಂದರೆ ಸರಿ. ಸದರಿ ಛಾಯಾಚಿತ್ರಗಳಲ್ಲಿ ಕಾಣಿಸುತ್ತಿರುವ ಸ್ವತ್ತು ಎಂದರೆ ಸಾಕ್ಷಿಯು ಈ ದಾವೆಯ ಎರಡನೇ ಷೆಡ್ಯೂಲ್ ಸ್ವತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. 'ಬಿ' ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡಬಾರದು ಎಂಬುದಾಗಿ ಮಾಗಡಿ ತಹಶೀಲ್ದಾರ್ ರವರು ನಿರ್ದೇಶನ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ 'ಬಿ' ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ಸ್ವಾಧೀನಾನುಭವದಲ್ಲಿದೆ ಎಂದರೆ ಸರಿ. ಪ್ರತಿವಾದಿಯು ವಿಭಾಗ ಪತ್ರದಂತೆ ಒಂದನೇ ತಾಕಿಯ ಜಮೀನಿನಲ್ಲಿ 4 ಎಕರೆಯ ಬದಲು 5 ಎಕರೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೀರಿ ಪ್ರತಿವಾದಿಯ ಜಮೀನಿನ ಪಶ್ಚಿಮ ದಿಕ್ಕಿಗೆ ತಮ್ಮ ಜಮೀನು ಇದೆ ಎಂದು ಬರೆಸಿದ್ದೀರಿ, ಸದರಿ ವಿಚಾರವಾಗಿ ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ವಿಭಾಗ ಪತ್ರ ಹಾಗೂ ವಿನಿಮಯ ಪತ್ರದ ಅನ್ವಯ ಅವರವರ ಹಿಸ್ಸೆಯಲ್ಲಿ ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ಮಾಹಿತಿಯನ್ನು ಪ್ರತಿವಾದಿ ಹಾಗೂ ಅವರ ಗಂಡ ನೀಡಿರುತ್ತಾರೆ ಸದರಿ ವಿಚಾರದ ಬಗ್ಗೆ ತಮಗೆ ಯಾವುದೇ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ತಾವು ತಮ್ಮ ಅಕ್ಕನಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**

**ಓ ಎಸ್ ನಂಃ 138/2017**
**ಡಿ ಡಬ್ಲ್ಯೂ ಃ 4**

**ದಿಃ 05.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಪಿ ವಕೀಲರಿಂದ :-**

ನಾನು ಪಿ ಯು ಸಿ ಯ ತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಪ್ರತಿವಾದಿಯ ವಕೀಲರಾದ ದೇವರಾಜೇಗೌಡರ ಕಛೇರಿಯಲ್ಲಿ ದೇವರಾಜೇಗೌಡರು ತಯಾರು ಮಾಡಿರುತ್ತಾರೆ. ಆ ಸಮಯದಲ್ಲಿ ನಾನು, ಪ್ರತಿವಾದಿ ಹಾಗೂ ಅವರ ಗಂಡ ವಕೀಲರ ಕಛೇರಿಗೆ ಹೋಗಿರುತ್ತೇವೆ. ತಾವೆಲ್ಲರೂ ಸೇರಿ ವಕೀಲರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ನ್ಯಾಯಾಲಯದಿಂದ ತಮಗೆ ಸಾಕ್ಷ್ಯ ನುಡಿಯುವಂತೆ ಯಾವುದೇ ಸಮನ್ಸ್ ಬಂದಿರುವುದಿಲ್ಲ ಎಂದರೆ ಸರಿ. ನಾನು ಈ ದಿನ ನ್ಯಾಯಾಲಯಕ್ಕೆ ಪ್ರತಿವಾದಿಯ ಗಂಡನ ಜೊತೆ ಬಂದಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ಸರ್ವೆ ನಂ. ಹಾಗೂ ವಿಸ್ತೀರ್ಣ ನನಗೆ ಗೊತ್ತು. ಅದರ ಚಕ್ಕುಬಂದಿ ಸರಿ ಇದೆ. ಪ್ರತಿವಾದಿಯು ಕ್ರಯಕ್ಕೆ ಪಡೆದಿರುವ ಒಂದನೇ ತಾಕಿನ 5 ಎಕರೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಒಂದನೇ ತಾಕು ಜಮೀನಿಗೂ ಹಾಗೂ ಎರಡನೇ ತಾಕಿನ ಜಮೀನಿಗೂ ಸುಮಾರು 300 ಮೀ. ಅಂತರ ಇದೆ. ಪ್ರತಿವಾದಿಯು ಸರೋಜಮ್ಮರವರಿಂದ ಒಂದನೇ ತಾಕಿನ ಜಮೀನಿನ ಪೈಕಿ 4 ಎಕರೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಪತ್ರದಲ್ಲಿ ಇರುವ ವಿಸ್ತೀರ್ಣದ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ದಾವಾ 'ಬಿ' ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಯು ಕಟ್ಟಡ ನಿರ್ಮಾಣ ಮಾಡಿ ಕೊಳವೆ ಬಾವಿ ಕೊರೆಸಿರುತ್ತಾರೆ ಎಂದರೆ ಸರಿ. ದಾವಾ 'ಬಿ' ಷೆಡ್ಯೂಲ್ ಸ್ವತ್ತಿನ ಉತ್ತರದ ಕಡೆ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. 'ಬಿ' ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. ದಾವಾ 'ಬಿ' ಷೆಡ್ಯೂಲ್ ನ ಸ್ವತ್ತಿನ ಮೇಲೆ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಅವರಿಗೆ ಹಕ್ಕು ಇದೆಯಾ ಅಥವಾ ಇಲ್ಲ ಎಂದು ತೀರ್ಮಾನ ಮಾಡಲು ನಾನು ಯಾರು ಎಂದು ಸಾಕ್ಷ್ಯ ನುಡಿಯುತ್ತಾರೆ. ಪ್ರತಿವಾದಿಯು ತಮ್ಮ ಪಕ್ಕದ ಮನೆಯವರಾದ ಕಾರಣ ಅವರಿಗೆ ಅನುಕೂಲವಾದ

ರೀತಿಯಲ್ಲಿ ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**